ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೬೭೫ (೧೬೯೫)

ಸದಸ್ಯರ ಹೆಸರು ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ)

ಉತ್ತರಿಸುವ ಸಚಿವರು ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕು ದೊಡ್ಡೇರಿ ಹೋಬಳಿಯ ಬಡವನಹಳ್ಳಿ ಮತ್ತು ದೊಡ್ಡೇರಿ ಗ್ರಾಮದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಖಾಸಗಿಯವರಿಗೆ ವಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿದೆ
ಆ)	ಈ ಎರಡು ಪ್ರಾತಮಿಕ ಆರೋಗ್ಯ ಕೇಂದ್ರಗಳಲ್ಲಿ ಶುಚಿತ್ವವಿಲ್ಲದೆ ತಪಾಸಣೆ ಸರಿಯಾಗಿಲ್ಲದಿರುವುದು ಮತ್ತು ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗೆ ಸಂಬಳವನ್ನು ಸಹ ಸರಿಯಾಗಿ ವಿತರಣೆ ಮಾಡುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿದೆ

ಇ)	ಹೌದಾದಲ್ಲಿ, ಖಾಸಗಿಯವರಿಗೆ ವಹಿಸಲಾಗಿರುವ ಆದೇಶವನ್ನು ಹಿಂದಕ್ಕೆ ಪಡೆಯುವ ಯೋಚನೆ ಸರ್ಕಾರಕ್ಕೆ ಇದೆಯೇ?	ಪರಿಶೀಲನೆಯಲ್ಲಿದೆ
ಈ)	ಹೌದಾದಲ್ಲಿ, ಕಾಲಮಿತಿ ಏನು?	ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೬೭೬ (೧೬೯೭)

ಸದಸ್ಯರ ಹೆಸರು ಶ್ರೀ ಲಾಲಾಜಿ ಆರ್ ಮಂಡನ್ (ಕಾಪು)

ಉತ್ತರಿಸುವ ಸಚಿವರು ಶ್ರೀ ರಾವು ನಾಯಕ್ ಬೆಳಮಗಿ (ಪಶುಸಂಗೋಪನ್ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಾಪು ಕ್ಷೇತ್ರ ವ್ಯಾಪಿತಿಯಲ್ಲಿ ಪ್ರಾದೇಶಿಕ ಗೋತಳಿಗಳ ಸಂರಕ್ಷಣೆಗೆ ಸರ್ಕಾರಿ ಜಮೀನನನ್ನು ಮೀಸಲಿಡಲು ಸರ್ಕಾರ ಕ್ರಮಕೈಗೊಂಡಿದೆಯೇ?	ಕಾಪು ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಗೋತಳಿ ಸಂರಕ್ಷಣಗೆ ಸರ್ಕಾರಿ ಜಮೀನು ಕಾದಿರಿಸುವ ಯೋಜನೆ ಸರ್ಕಾರದ ಮುಂದಿರುವುದಿಲ್ಲ
ಆ)	ಹಾಗಿದ್ದಲ್ಲಿ, ಮೀಸಲಿರಿಸಿದ ಸ್ಥಳಗಳ ಯವುವು (ವಿವರ ಒದಗಿಸುವುದು)	ಪ್ರಶ್ನೆ ಉದ್ಭವಿಸುವುದಿಲ್ಲ